**ಅಸಲು ದಾವಾ. ನಂಃ 11/2023**

**ಪಿಡಬ್ಲೂ – 2**

**ಸಾಕ್ಷಿಯನ್ನು ದಿನಾಂಕಃ 14.11.2024 ರಂದು ಕರೆಯಿಸಿ,ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂಬರ 1 ರಿಂದ 5 ಪರ ಶ್ರೀ ಎಸ್ ಎಚ್ ಜೆ ವಕೀಲರಿಂದಃ**

1. ನಾನು ಪಿಯುಸಿ ವ್ಯಾಸಾಂಗ ಮಾಡಿದ್ದೇನೆ. ವಿ.ಪಿ.ಸಿ. ನಂಬರ 651 ಯಾರಿಂದ ಬಂದಿರುತ್ತದೆ ಎಂದರೆ ಸಾಕ್ಷಿಯು ನನ್ನ ಅಜ್ಜಿ ದುರ್ಗಮ್ಮರವರಿಂದ ನಮ್ಮ ತಂದೆಗೆ ಬಂದಿರುತ್ತದೆ . ಪ್ರಸ್ತುತ ನನ್ನ ತಾಯಿ ದುರ್ಗವ್ವರವರ ಹೆಸರಿನಲ್ಲಿದೆ. ನನ್ನ ಅಜ್ಜಿ ದುರ್ಗವ್ವ ದೇವದಾಸಿಯಾಗಿದ್ದು ಅವಳ ಹೆಸರಿಗೆ ಖಾಲಿ ಜಾಗವನ್ನು ನೀಡಿದ್ದು ಅವಳ ಹೆಸರಿಗೆ ನೀಡಿರುತ್ತಾರೆ. ನನ್ನ ಅಜ್ಜಿಗೆ ಗ್ರಾಮ ಪಂಚಾಯತಿಯಿಂದ ಯಾವುದೇ ಜಾಗವನ್ನು ಮಂಜೂರು ಮಾಡಿಲ್ಲ.

2. ನನ್ನ ತಾಯಿಯು ಸಹ ಗ್ರಾಮ ಪಂಚಾಯತಿಗೆ ಮಂಜೂರು ಮಾಡಬೇಕೆಂದು ಅರ್ಜಿ ನೀಡಿಲ್ಲ. ನನ್ನ ತಾಯಿಯ ಹೆಸರಿಗೆ 2006 ರಲ್ಲಿ ನಮೂದು ಮಾಡಿದ್ದಾರೆ. ನನ್ನ ತಾಯಿಯ ಹೆಸರಿಗೆ ಗ್ರಾಮ ಪಂಚಾಯತಿ ಸಭೆಯಲ್ಲಿ ಮಾಡಿದ್ದಾರೆ. ನನ್ನ ತಾಯಿಯ ಹೆಸರಿಗೆ ಪಂಚಾಯತಿಯವರು ಯಾವುದೇ ಠರಾವು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಪ್ರತಿವಾದಿಗಳಿಗೆ ಮಂಜೂರು ಮಾಡಿರುವ ಸ್ವತ್ತು ಇದೆ ಎಂದರೆ ಸರಿಯಲ್ಲ. ಗ್ರಾಮ ಪಂಚಾಯತಿಯಲ್ಲಿ ಆಗಿರುವ ಠರಾವನ್ನು ನಮೂನೆ 15 ರಲ್ಲಿ ನಮೂದು ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದನ್ನು ನೋಡಿ ಒಪ್ಪಿದ್ದರಿಂದ ನಿಡಿ –1 ಎಂದು ಗುರುತಿಸಲಾಯಿತು. ಅದರಲ್ಲಿ ವಿ.ಪಿ.ಸಿ. ನಂಬರ 651 ಕ್ಕೆ ಸಂಬಂದಿಸಿದಂತೆ ಬರೆದಿರುವ ಠರಾವನ್ನು ನಿಪಿ – 1(ಎ) ಎಂದು ಗುರುತಿಸಲಾಯಿತು. ನಿಪಿ – 6 ರಲ್ಲಿ ನಮೂದಿಸಿರುವ ಠರಾವಿಗೆ ಸಂಬಂದಿಸಿದಂತೆ ಮೂಲ ಠರಾವು ನಮಗೆ ಸಂಬಂದಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ಠರಾವಿನ ನಕಲನ್ನು ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ –2 ಎಂದು ಗುರುತಿಸಲಾಯಿತು. ಅದರಲ್ಲಿರುವ ತಮ್ಮ ತಂದೆಯ ಹೆಸರನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ –2 (ಎ) ಎಂದು ಗುರುತಿಸಲಾಯಿತು. **ಸೂಚನೆಃ ಸಂಪೂರ್ಣ ಠರಾವು ಇರುವುದಿಲ್ಲ.**

4. ದಾವಾ ಸ್ವತ್ತನ್ನು ಪಂಚಾಯತಿಯವರು ಅಳತೆ ಮಾಡಿದ್ದಾರೆ. ನಮ್ಮ ಸ್ವತ್ತಿನ ಪೂರ್ವಕ್ಕೆ ಹನಮವ್ವ ಕೋಂ ಬಸಪ್ಪ ಮಾದರವರ ಖಾಲಿ ಜಾಗ ಇದೆ ಎಂದರೆ ಸರಿ. ಅವರಿಗೂ ಸಹ ಠರಾವಿನ ಮೂಲಕ ನೀಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಯಿತು.**

***(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)***

ಓ. ಹೇ. ಕೇ. ಸರಿ ಅದೆ.

-ಸಹಿ-

ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.